ಗೌಂಟಿ ಓಣಿಯ ಶಬಾನಾಳ ಬಳಿ ಹೋಗಬೇಕಿತ್ತು. ಮೊದಲು ಯಾರ ಬಳಿಯಾದರೂ ಅವಳಿಗೆ ಹೇಳಿ ಕಳುಹಿಸಬೇಕು. ತನ್ನ ಬಳೆಯ ಬುಟ್ಟಿ ಹೊತ್ತುಕೊಂಡು ಕರೆದವರ ಮನೆಗೆ ಬರುತ್ತಿದ್ದ ಶಬಾನಾ ಒಂದೇ ಮನೆಯಾದಲ್ಲಿ ಡಜನ್ನಿಗೆ ಎರಡು ಪಟ್ಟು ಹಣವನ್ನು ತೆಗೆದುಕೊಳ್ಳುತ್ತಿದ್ದಳು. ಹಾಗಾಗಿ ಅವಳನ್ನು ಕರೆಸುವ ಮೊದಲು ಇಡೀ ಓಣಿಗೆ ಸಂದೇಶ ರವಾನೆಯಾಗುತ್ತಿತ್ತು. ಮತ್ತೆ ಯಾರಾದರೂ ಬಳೆ ಇಡಿಸಿಕೊಳ್ಳುವವರು ಸಿಕ್ಕರೆ ದುಡ್ಡು ಕಡಿಮೆಯಾಗುತ್ತದೆಯಲ್ಲ ಎನ್ನುವ ಆಶಯ. ಆದರೆ ಅವಳ ಬಳಿ ಇರುತ್ತಿದ್ದುದು ಎರಡೋ ಮೂರೂ ಬಣ್ಣಗಳು ಮಾತ್ರ. ನೆಂಟರಿಷ್ಟರು ಬಂದಾಗ, ಹಬ್ಬಕ್ಕೆ ಬಂದ ಅಕ್ಕತಂಗಿಯರಿಗೆ ಬಳೆ ಇಡಿಸಿ ಕಳಿಸುವ ಪ್ರಸಂಗ ಬಂದಾಗ ಮಾತ್ರ ಶಬಾನಾಳನ್ನು ಕರೆಸುತ್ತಿದ್ದರು. ಸಂತೆಯಲ್ಲಾದರೆ ತರಹೇವಾರಿ ಬಳೆಗಳು. ಪ್ರಸಿದ್ಧ ಸಿನಿಮಾಗಳಾದ 'ಯಜಮಾನ', 'ಚಂದ್ರಮುಖಿ ಪ್ರಾಣಸಖಿ' ಇತ್ಯಾದಿ ಸಿನಿಮಾಗಳಲ್ಲಿ ನೋಡಿದ ಬಳೆಗಳು ಸಹ ಸಿಗುತ್ತಿದ್ದವು. ಕೆಲವೊಮ್ಮೆ ಇಂತಹದೇ ಬಣ್ಣದ ಇಂತಹದೇ ಆಕಾರದ ಬಳೆಗಳನ್ನು ತೆಗೆದುಕೊಂಡು ಬರಬೇಕೆಂದು ಅಂಗಡಿಯವನಿಗೆ ಹೇಳಿದರೆ ಆತ ನೆನಪಿಟ್ಟುಕೊಂಡು ಮುಂದಿನ ವಾರದಲ್ಲಿ ತರುತ್ತಿದ್ದ.

ಬಳೆ ಅಂಗಡಿಯ ಪಕ್ಕ ಗೋಣಿಚೀಲ, ವೈರ್ ಚೀಲ, ಉಲ್ಲನ್ನಿನಲ್ಲಿ ಸುಂದರವಾಗಿ ಹೆಣೆದ ಚೀಲಗಳನ್ನಿಟ್ಟುಕೊಂಡು ನಾಗೇಂದ್ರ ಕುಳಿತಿರುತ್ತಿದ್ದ. ಅವನ ಪಕ್ಕದಲ್ಲಿದ್ದ ಜಾಗದಲ್ಲಿ ಆಗಾಗ ಸೀರೆಯಂಗಡಿಯವನೊಬ್ಬ ಬರುತ್ತಿದ್ದ. ಐವತ್ತು ರೂಪಾಯಿ, ನೂರು ರೂಪಾಯಿಗೆ ಒಳ್ಳೆ ಡಿಸೈನ್ ಸೀರೆಗಳನ್ನು ಮಾರುತ್ತಿದ್ದರಿಂದ ಹೆಂಗಸರು ಮುಕ್ಕುತ್ತಿದ್ದರು. ಅದೂ ಅಲ್ಲದೆ ಆತ ಕೂಗುವ ಪರಿಯೂ ಹಾಸ್ಯಮಯವಾಗಿರುತ್ತಿತ್ತು. ಸಿನಿಮಾದಲ್ಲಿ ಹೇಳುವ ಸಂಭಾಷಣೆಯ ಹಾಗೆ 'ಬನ್ನಿ ಬನ್ನಿ ಹೆಂಗಳೆಯರೇ... 'ಮುತ್ತಿನಹಾರ'ದಾಗ ಸುಹಾಸಿನಿ ಉಟಕೊಂಡಿದ್ದ ಸೀರಿ ಐತಿ, 'ಬೆಳ್ಳಿಮೋಡಗಳು' ಸಿನಿಮಾದಾಗ ಸುನೀಲ ಮಾಲಾಶ್ರೀಗೆ ಕೊಟ್ಟಿದ್ದ ಸೀರಿ ಐತಿ, ಈ ಕೆಂಪ ಸೀರಿ ಉಟಕೊಂಡ್ರ ಶ್ರುತಿ ಹಂಗ ಕಾಣಿಸ್ತೀರಿ, ಈ ಹಸರ ಸೀರಿ ಉಟ್ಟರ ಥೇಟ ಮೋಹಿನಿ ಹಂಗ ಕಾಣ್ತೀರಿ...' ಇನ್ನು ಅನೇಕ ತಾರೆಯರ, ಸಿನಿಮಾಗಳ ಹೆಸರುಗಳನ್ನೂ ತನ್ನ ಯಾವುದೋ ದಶಕದ ವಿಕಾರವಾಗಿ ಕಿರುಚುತ್ತಿದ್ದ ಸ್ಪೀಕರಿನಲ್ಲಿ ಹೇಳುತ್ತಾ ಜನರನ್ನು ಆಕರ್ಷಿಸುತ್ತಿದ್ದ. ನಮ್ಮಜ್ಜನ ಊರಿನಲ್ಲಿದ್ದ ಜನರೇನೂ ಸಿನಿಪ್ರಿಯರಲ್ಲ. ಅವನು ಹೇಳುತ್ತಿದ್ದ ಎಷ್ಟೋ ಸಿನಿಮಾಗಳನ್ನು ಅವರು ನೋಡಿರಲೂ ಇಲ್ಲ. ಆದರೆ ಅವನು ಹೇಳುವುದು ಅವರಿಗೆ ಯಾವುದೋ ಸಿನಿಮಾ ಕತೆಯಂತೆ ಭಾಸವಾಗುತ್ತಿತ್ತು. ಜನರ ದೌರ್ಬಲ್ಯಗಳನ್ನು ತಿಳಿದ ಸೀರೆಯಂಗಡಿಯವ ಮುಖ ನೋಡಿ ಮಣೆ ಹಾಕುತ್ತಿದ್ದ. ಸಂಜೆಯ ಹೊತ್ತಿಗೆ ತನ್ನ ವ್ಯಾಪಾರ ಮುಗಿಸಿ ಸಂತೃಪ್ತಿಯಿಂದ ಮನೆಗೆ ಹೊರಡುತ್ತಿದ್ದ. ಇತ್ತ ಒಮ್ಮೆ ತೊಳೆದರೆ ಬಣ್ಣ ಕಳೆದುಕೊಳ್ಳುವ ಸೀರೆಗಳ ಸೆರಗನ್ನು ಬೀಸುತ್ತ ತಾರಾ, ಸುಹಾಸಿನಿ, ಮಾಲಾಶ್ರೀ, ಶ್ರುತಿ, ಎಲ್ಲ ಕನಸಿನಲ್ಲಿ ತಮ್ಮ



ಕಲ್ಪನೆಯ ನಾಯಕನೊಂದಿಗೆ ಮರ ಸುತ್ತುತ್ತಿದ್ದರು.

ಸ್ಟೀಲ್ ಪಾತ್ರೆ ಅಂಗಡಿಯ ಎದುರಿಗೆ ಬೆಡ್‌ಶೀಟ್, ತಲೆದಿಂಬು, ಚಾದರಗಳನ್ನು ಮಾರುವ ಹಾಸಿಗೆಯ ಅಂಗಡಿ. ಪಕ್ಕಕ್ಕೆ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರುವ ಅದಕ್ಕಿಂತಲೂ ಹೆಚ್ಚಾಗಿ ತೂತು ಬಿದ್ದ ಪ್ಲಾಸ್ಟಿಕ್ ಕೊಡ, ಬಕೆಟ್ಟುಗಳನ್ನು ಪ್ಲಾಸ್ಟಿಕ್ಕಿನ ತೇಪೆ ಹಚ್ಚಿ ಸರಿ ಮಾಡಿಕೊಡುವ ಪ್ಲಾಸ್ಟಿಕ್ಕಿನ ಅಂಗಡಿ. ಪ್ಲಾಸ್ಟಿಕ್ ಅತಿಯಾಗಿ ಮಾರುಕಟ್ಟೆಗೆ ನುಗ್ಗಿದ ಕಾಲವದು. ಇಲ್ಲಿಗೆ ಸಂತೆ ಮುಗಿದಂತೆಯೇ... ಅಲ್ಲಿಯೇ ಪಕ್ಕದಲ್ಲಿ ಹಳೆಯ ಪೇಪರ್, ಕಬ್ಬಿಣದ ವಸ್ತುಗಳನ್ನು ಕೊಟ್ಟು ದುಡ್ಡು ಪಡೆಯಲು ಬರುವ ಗಿರಾಕಿಗಳಿಗಾಗಿ ಕಾಯುವ ಗುಜರಿಯವ, ಮೈಗೆ ಹಚ್ಚಿಕೊಳ್ಳುವ ಸೋಪು, ವಾಷಿಂಗ್ ಪೌಡರ್ ನಿರ್ಮಾ ಇತ್ಯಾದಿ ಮಾರುವವ, ಹೀಗೆ ಕಾಯಂ ಅಲ್ಲದ ಆಗಾಗ ಬರುತ್ತಿದ್ದ ವ್ಯಾಪಾರಿಗಳಿರುತ್ತಿದ್ದರು. ಮದುವೆಯೂಟದಲ್ಲಿ ಕೊನೆಗೆ ಬಡಿಸುವ ಸಿಹಿ ತಿಂಡಿಯಂತೆ ಸಂತೆಯಲ್ಲೂ ಕೊನೆಗೆ ಸಿಹಿ ತಿಂಡಿಗಳನ್ನು ಮಾರುವ ಟೆಂಪೋ ಗಾಡಿಯೊಂದು ನಿಂತಿರುತ್ತಿತ್ತು. ಬುಂದೆ ಉಂಡಿ, ಬಾದಾಮ್ ಪುರಿ, ಮೈಸೂರ್ ಪಾಕ್, ಜಿಲೇಬಿ, ಬರ್ಫಿ, ಗುಲಾಬಿ ಬಣ್ಣದ ಕೇಕು, ಹೀಗೆ ಬಾಯಲ್ಲಿ ನೀರೂರಿಸುವಂತೆ ಖಾದ್ಯಗಳ ಮೇಳ. ಇವನ ಸಿಹಿ ತಿಂಡಿಗಳಿಗೆ ಮುಕ್ಕುತ್ತಿದ್ದ ನೊಣಗಳಿಂದಾಗಿ ಸಂತೆಯ ಕೊನೆಯಲ್ಲಿ ಜಾಗ ಸಿಕ್ಕಿತ್ತು. ತನ್ನ ಗಾಡಿಯ ಹಾರ್ನ್ ಬಾರಿಸುತ್ತ ತಿಂಡಿಗಳ ಹೆಸರನ್ನು ಜೋರಾಗಿ ಕೂಗಿ ಹೇಳುವ ಅವನು ನೋಡಲಿಕ್ಕೆ ಚಿಕ್ಕವನಂತೆ ಕಾಣಿಸಿದರೂ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿದ್ದ. ಮಾರವಾಡಿಯಾಗಿದ್ದರಿಂದ ಊರಿನ ಜನರಿಗೆ ಅವನ ಬಗ್ಗೆ ಎಲ್ಲಿಲ್ಲದ ಆಸಕ್ತಿ. ಅವರು ಬಹಳ ಶ್ರೀಮಂತರಿರುತ್ತಾರೆಂದು ಮನೆಗೆ ಚಿನ್ನದ ಇಟ್ಟಿಗೆಗಳನ್ನು ಹಾಕಿಸುತ್ತಾರೆಂದು ಜನರ ನಂಬಿಕೆ. ಅವನು ಕೇಕಿನಲ್ಲಿ ಬಂಗಾರದ ನಾಣ್ಯವನ್ನು ಹಾಕಿ ಮಾರುತ್ತಾನೆಂದು ಯಾರೋ ಹೇಳಿದ್ದರಿಂದ ಜನ ಆಗಾಗ ಕೇಕ್ ಕೊಂಡು ನಾಣ್ಯಕ್ಕಾಗಿ ಹುಡುಕಿ ಅದು ಸಿಗದೇ ಹತಾಶರಾದ ಕಥೆಗಳೂ ಇದ್ದವು. ಅವನು ಮಾತ್ರ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಸಿಹಿಗಾಗಿ ಸುತ್ತ ಸುತ್ತುತ್ತಿದ್ದ ಮಕ್ಕಳನ್ನು, ನೊಣಗಳನ್ನು ಓಡಿಸುವಲ್ಲಿ ಸದಾ ನಿರತನಾಗಿರುತ್ತಿದ್ದ.

ಕೊನೆಯಲ್ಲಿ ತಲೆಮಾರುಗಳ ಬಳಕೆಯಿಂದ ಕಪ್ಪು ಬಣ್ಣಕ್ಕೆ ತಿರುಗಿರುವ ತನ್ನ ಐಸ್‌ಕ್ರೀಂ ಡಬ್ಬಿಯನ್ನು ಸೈಕಲ್ ಮೇಲೆ ಪೇರಿಸಿಟ್ಟುಕೊಂಡಿರುವ, ಆಗಾಗ ಸಂತೆಯೊಳಗೆ ಸುತ್ತು ಹಾಕಿ ಬರುವ ಬುಕ್ಕಲ್ ನಿಂತಿರುತ್ತಿದ್ದ. ಮೇಲಿನ ಒಂದೆರಡು ಗುಂಡಿ ಕಿತ್ತುಹೋಗಿರುವ ಕೊಳಕು ಅಂಗಿ ಧರಿಸಿದ ಸಣ್ಣ ಶರೀರದ ಬುಕ್ಕಲ್ ವಾಸನೆ ಹೊಡೆಯುತ್ತಿದ್ದ. ಅವನ ಸೈಕಲ್ಲಿಗೆ ಹಸಿರು ಬಣ್ಣದ ಪಾಮ್ ಪಾಮ್ ಎಂದು ಶಬ್ದ ಮಾಡುವ ರಬ್ಬರಿನ ತುತ್ತೂರಿಯಿತ್ತು. ಕೆಲವೊಮ್ಮೆ ಬೀಡಿ ಸೇದುತ್ತಲೇ ಸೈಕಲ್ ತಳ್ಳುತ್ತ ಸಿಕ್ಕ ಅಲ್ಪಸ್ವಲ್ಪ ಪುಡಿಗಾಸನ್ನು ಸಾರಾಯಿಗೆ ಹಾಕುತ್ತಿದ್ದ. ಶಾಲೆಗೆ ರಜೆಯಿದ್ದ ಮಧ್ಯಾಹ್ನಗಳಲ್ಲಿ ಊರಿನ ಬೀದಿಗಳಲ್ಲಿ ಪಾಂವ್ ಪಾಂವ್ ಬಾರಿಸುತ್ತ ಇಲ್ಲವೇ ಐssssssssss ಕ್ರೀಮ್ ಎಂದು ಕೂಗುತ್ತ ಕಾಣಿಸಿಕೊಳ್ಳುತ್ತಿದ್ದ. ದುಡ್ಡು ಕೊಟ್ಟು ಕೊಳ್ಳಬೇಕೆಂದೇನಿಲ್ಲ. ಒಂದೆರಡು ಗೊಂಜಾಳಿನ ತೆನೆ, ಪಾವು ಸೇರು ಅಕ್ಕಿ ಅಥವಾ ಭತ್ತ ಕೊಟ್ಟರೆ ಸಾಕು ಒಂದು ಐಸ್‌ಕ್ರೀಂ ಕೊಡುತ್ತಿದ್ದ. ಸಂತೆಯ ದಿನ ಮಾತ್ರ ಐವತ್ತು ಪೈಸೆ ಕಡ್ಡಾಯ.

ಈಗ ಎಲ್ಲವೂ ಮನೆಬಾಗಿಲಿಗೆ ಬರುತ್ತಿರುವ ಹೊತ್ತಿನಲ್ಲಿ ನಾನು ಸಂತೆಯನ್ನು ನೆನೆಸಿಕೊಳ್ಳುತ್ತಿದ್ದೇನೆ. ಇನ್ನೊಂದು ಹತ್ತು ವರ್ಷಗಳಾದ ಮೇಲೆ 'ಅಯ್ಯೋ, ಆಗ ಮನೆಬಾಗಿಲಿಗೆ ಜನ ಬಂದು ಸಾಮಾನು ಕೊಟ್ಟು ಹೋಗುತ್ತಿದ್ದರು, ಈಗ ರೊಬೋಟ್‌ಗಳು ಬರುತ್ತಿವೆ' ಎನ್ನುತ್ತ ಈಗಿರುವ ಡೆಲಿವರಿ ಪದ್ಧತಿಯನ್ನು ನೆನೆಸಿಕೊಳ್ಳುತ್ತೇನೇನೋ. ನಾವು ಯಾವಾಗಲು ಹೀಗೆಯೇ ಅಲ್ಲವೇ? ವರ್ತಮಾನದಲ್ಲಿರುವುದಕ್ಕಿಂತ ಹೆಚ್ಚಾಗಿ ಭೂತವನ್ನು ನೆನಪಿಸಿಕೊಳ್ಳುತ್ತಲೋ, ಭವಿಷ್ಯಕ್ಕಾಗಿ ಕಾಯುತ್ತಲೋ ಇರುತ್ತೇವೆ. ಈಗ ನಾನ್‌ಸ್ಟಿಕ್ ಪಾತ್ರೆಗಳು ಬೇಡವೆಂದು ತಾಮ್ರ, ಹಿತ್ತಾಳೆಯ ಪಾತ್ರೆಗಳತ್ತ ಒಲವು ತೋರಿಸುವಾಗ ಆ ಕಾಲದಲ್ಲಿ ಹೆಣ್ಣುಮಕ್ಕಳು ಇವೇ ತಾಮ್ರ, ಹಿತ್ತಾಳೆಯ ಪಾತ್ರೆಗಳು ತೊಳೆಯುವುದು ಎತ್ತಿಡುವುದಕ್ಕೆಲ್ಲ ಕಷ್ಟವೆಂದು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳಿಗೆ ಹಪಹಪಿಸುತ್ತಿದ್ದರು. ಕ್ರಮೇಣ ನಾನ್‌ಸ್ಟಿಕ್‌ನಲ್ಲಿ ದೋಸೆ ಚೆನ್ನಾಗಿ ಏಳುತ್ತದೆ, ತೊಳೆಯುವುದು ಒಂದಿನಿತು ಶ್ರಮವಿಲ್ಲ ಎಂದು ಪ್ರಚಾರವಾದಾಗ ಎಲ್ಲವನ್ನು ಬಿಟ್ಟು ಅವುಗಳನ್ನೇ ಕೊಂಡರು. ಹೀಗೆ ಹಿಂದಕ್ಕೆ ಮುಂದಕ್ಕೆ ತೂಗುತ್ತ ಇದ್ದಲ್ಲಿಯೇ ಇದ್ದು ಈ ಸಮಯದ ಸಂತೃಪ್ತಿಯನ್ನು ಆಸ್ವಾದಿಸುತ್ತಿಲ್ಲವೇನೋ ಎಂದು ಎಷ್ಟೋ ಸಲ ಅನ್ನಿಸುತ್ತದೆ. ಮಾಲ್‌ಗಳಿಗೆಲ್ಲ ಹೋಗುವುದೇ ಪ್ರತಿಷ್ಠೆಯ ಸಂಗತಿಯಾಗಿತ್ತು ಒಂದು ಕಾಲದಲ್ಲಿ. ಆದರೆ ಈಗ ಊರಿನ ತುಂಬ ಮೊಡವೆಗಳಂತೆ ಎದ್ದಿರುವ ಮಾಲ್‌ಗಳನ್ನು ಬಿಟ್ಟು ಸಂತೆಗೆ ಹೋಗಬೇಕು ಎನ್ನಿಸುತ್ತಿರುವುದಕ್ಕೆ ಏನೆಂದು ಹೆಸರು?

ಪ್ರತಿಕ್ರಿಯಿಸಿ: **feedback@sudha.co.in**